ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಬುಧವಾರ 25ನೇ ಅಕ್ಟೋಬರ್ 2000ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11.00 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ಎಂ.ವಿ. **ವೆಂಕಟಪ್ಪ**) ಅವರು ಪೀಠದಲ್ಲಿ ಉಪಸ್ಥಿತರಿದ್ದರು.

ನಿಲುವಳಿ ಸೂಚನೆ ಚರ್ಚೆಗೆ ಅನುಮತಿ ಕೋರಿಕೆ

ರಾಜ್ಯದಲ್ಲಿ ಅತಿವೃಷ್ಟಿ ಕುರಿತು

ಶ್ರೀ ಜಗದೀಶ್ ಶೆಟ್ಟರ್ : (ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೆ, ಅತಿವೃಷ್ಟಿಯ ಬಗ್ಗೆ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ. ಆ ಬಗ್ಗೆ ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಕೊಡಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ನಾವು ಸಹ ನಿಲುವಳಿ ಸೂಚನೆಯನ್ನು ಕೊಟ್ಟು ಆ ಬಗ್ಗೆ ಚರ್ಚೆ ಮಾಡಬೇಕೆಂದು ಮನವಿ ಮಾಡಿದ್ದೇವೆ. ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡಲಿಕ್ಕೆ ನಮ್ಮದೇನು ತಕರಾರು ಇಲ್ಲ.

ಅಧ್ಯಕ್ಷರು : ಅವರದು ಆಗಲಿ, ತಾವು ಆಮೇಲೆ ಮಾತನಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸಾವಿರಾರು, ಲಕ್ಷಾಂತರ ರೈತರು ತೊಂದರೆಯಲ್ಲಿದ್ದಾರೆ.

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುವಾಗ ಹೀಗೆ ಮಾತನಾಡಿದರೆ ಹೇಗೆ ?

ಅಧ್ಯಕ್ಷರು : ನೀವು ಕುಳಿತುಕೊಳ್ಳಿ, ನೀವು ಹೇಳುವುದನ್ನು ನಾನೇ ಹೇಳುತ್ತಿದ್ದೇನೆ. ಮಾನ್ಯ ಸಿಂಧ್ಯಾರವರೇ ಒಂದು ನಿಮಿಷ ತಡಿಯಿರಿ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ನಿನ್ನೆ ನಿಲುವಳಿ ಸೂಚನೆಯನ್ನು ಕಳುಹಿಸಿ ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೇಳಿದ್ದೆವು. ರಾಜ್ಯದ ಜನತೆ ವಿರೋಧ ಪಕ್ಷಗಳು ಸತ್ತಿವೆಯೇ ಏನೂ ಚರ್ಚೆ ಮಾಡುತ್ತಿಲ್ಲ, ಎನ್ನತಕ್ಕ ಮಾತನ್ನು ಕೇಳುತ್ತಿದ್ದಾರೆ. ಸರ್ಕಾರ ಇವತ್ತು ಹಾಳಾಗಿ ಹೋಗಿದೆ. ಸರ್ಕಾರ ಕೆಲಸ ಮಾಡುತ್ತಿಲ್ಲ. ನಾವು ಇಲ್ಲಿ ತುತ್ತೂರಿ ಬಾರಿಸುವುದಕ್ಕೆ ಆಗುವುದಿಲ್ಲ. ಮಾನ್ಯ ಅಧ್ಯಕ್ಷರೆ, ನಾನು ತಮ್ಮ ವಿವೇಚನೆಗೆ ಬಿಡುತ್ತೇನೆ. ಯಾರಿಗೆ ಅವಕಾಶ ಕೋಡಬೇಕು, ಯಾರಿಗೆ ಕೊಡಬಾರದು

ಎನ್ನುವುದು ತಮ್ಮ ಅಧಿಕಾರಕ್ಕೆ ಸೇರಿರತಕ್ಕ ವಿಚಾರ. ಈ ಸರ್ಕಾರ ಕೆಲಸ ಮಾಡುತ್ತಿಲ್ಲ. ರೈತರ ಪಾಲಿಗೆ, ಜನಗಳ ಪಾಲಿಗೆ ಸರ್ಕಾರ ಸತ್ತಿದೆ.

ಶ್ರೀ ಜಗದೀಶ್ ಶೆಟ್ಟರ್ : ಮೊದಲು ನಾನು ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಕೊಡಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸರ್ಕಾರ ಜನಗಳ ಪಾಲಿಗೆ ಸತ್ತಿದೆ. ನಿಲುವಳಿ ಸೂಚನೆಗೆ ಯಾವ ರೀತಿ ಅವಕಾಶ ಮಾಡಿಕೊಡಬೇಕೆನ್ನುವುದು ನಿಮಗೆ ಬಿಟ್ಟಿದ್ದುದು ನಾವು ಮನವಿ ಮಾಡುತ್ತಿದ್ದೇವೆ. ವಿರೋಧಪಕ್ಷದ ನಾಯಕರು ಮಾತನಾಡಲಿಕ್ಕೆ ನಮ್ಮದೇನೂ ತಕರಾರು ಇಲ್ಲ.

(ಬಿ.ಜೆ.ಪಿ. ಯ ಐದಾರು ಸದಸ್ಯರು ಒಟ್ಟಿಗೆ ಎದ್ದು ನಿಂತು ಮಾನ್ಯ ಸದಸ್ಯರು ಶಿಸ್ತಿನಿಂದ ವರ್ತನೆ ಮಾಡಬೇಕು, ಇದೇನು ಎಂದು ಗುಡುಗಿದರು)

ಭಾರತೀಯ ಜನತಾ ಪಕ್ಷದ ಸದಸ್ಯರುಗಳಿಂದ ನಾನು ಶಿಸ್ತನ್ನು ಕಲಿಯಬೇಕಾಗಿಲ್ಲ. ಗೋವಾ ರಾಜ್ಯದಲ್ಲಿ ಏನು ಮಾಡಿದ್ದಾರೆಂಬುದು ನನಗೆ ಗೊತ್ತಿದೆ, ನಿಮಗೆ ನಾಚಿಕೆಯಾಗಬೇಕು.

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಡಿ.ವಿ. ಸದಾನಂದಗೌಡ : ಅಧ್ಯಕ್ಷರೆ, ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ.

ಅಧ್ಯಕ್ಷರು : ಅವರು ಕುಳಿತುಕೊಂಡರು ಬಿಡಿ ಇನ್ನೂ ಏತಕ್ಕೆ ಪಾಯಿಂಟ್ ಆಫ್ ಆರ್ಡರ್? ನಿಮ್ಮ ನಾಯಕರು ಮಾತನಾಡುತ್ತಿದ್ದಾರೆ.

ಶ್ರೀ ಎಸ್. ಸುರೇಶ್‌ಕುಮಾರ್ : ಹ್ಯೂಮನ್ ಬುಲ್‌ಡೋಜರ್ ಎಂದು ಕೇಳಿದ್ದೆವು.....

ಅಧ್ಯಕ್ಷರು : ಕಾಂಟ್ರವರ್ಶಿಯಲ್ ಸಬ್ಜೆಕ್ಟ್ ಮಾತನಾಡಬೇಡಿ.

ಒಬ್ಬ ಸದಸ್ಯರು : ನಿನ್ನೆ ದಿವಸ ನಿಯಮ 68ರಲ್ಲಿ ನಮ್ಮ ನಾಯಕರು ಪ್ರಸ್ತಾಪ ಮಾಡಿದ್ದರು.....

ಶ್ರೀ ಡಿ.ವಿ. ಸದಾನಂದಗೌಡ : ನಾನು ಪಾಯಿಂಟ್ ಆಫ್ ಆರ್ಡರ್ ಹೇಳಿದ್ದೇನೆ.

(ಗೊಂದಲ)

ಶ್ರೀ ಸಿ. ಭೈರೇಗೌಡ : ಅವರು ಮಾತನಾಡಿದ ಮೇಲೆ ನಮಗೆ ಮಾತನಾಡಲಿಕ್ಕೆ ತಾವು ಅವಕಾಶ ಕೊಡಬೇಕು.

(ಗೊಂದಲ)

ಒಬ್ಬ ಸದಸ್ಯರು : ಅಜೆಂಡಾ ಪ್ರಕಾರ ತಾವು ಹೋಗಿ.

(ಗೊಂದಲ)

Mr. SPEAKER : Please resume your seats.

Sri. S. SURESH KUMAR : We are seeing human bulldozers.....

ಅಧ್ಯಕ್ಷರು : ಮಾನ್ಯ ಸುರೇಶ್‌ರವರೇ, ಮಾನ್ಯ ಭೈರೇಗೌಡರೇ, ತಾವು ದಯವಿಟ್ಟು ಕುಳಿತುಕೊಳ್ಳಿ. ಈಗ ಯಾವುದೂ ಬೇಡ. ಮೊದಲು ಪ್ರಶ್ನೋತ್ತರ ವೇಳೆಯನ್ನು ಪ್ರಾರಂಭ ಮಾಡೋಣ. ಆಮೇಲೆ ಮಾತನಾಡಿ.

Sri C. BAIREGOWDA : There cannot be a point of order.

Sri S. SURESH KUMAR : He does not know what is the point of order.

ಶ್ರೀ ಜಗದೀಶ್ ಶೆಟ್ಟರ್ : ಇಲ್ಲ, ಪ್ರಶ್ನೋತ್ತರ ಮತ್ತು ಬೇರೆ ಎಲ್ಲವನ್ನೂ ಸಸ್ಪೆಂಡ್ ಮಾಡಿ. ಏಕೆಂದರೆ ಇದು ಬಹಳ ಮುಖ್ಯವಾದ ವಿಷಯ .

ಅಧ್ಯಕ್ಷರು : ಒಂದು ಗಂಟೆಯಲ್ಲಿ ಏನೂ ಆಗುವುದಿಲ್ಲ. We will take it up after the question hour.

ಶ್ರೀ ಕಾಗೋಡು ತಿಮ್ಮಪ್ಪ : ಇವತ್ತಿನ ದಿವಸ ಹೊಸ ಪದ್ಧತಿಯನ್ನು ಪ್ರಾರಂಭ ಮಾಡುತ್ತಿದ್ದಾರೆ ಎಂದರೆ ನಾವು ಆಶ್ಚರ್ಯಪಡಬೇಕಾಗುತ್ತದೆ.

ಶ್ರೀ ಎಸ್. ಸುರೇಶ್‌ಕುಮಾರ್ : ನಿನ್ನೆ ಆಡಳಿತದ ಅನಾವೃಷ್ಟಿ. ಇವತ್ತು ಪ್ರಕೃತಿಯ ಅತಿವೃಷ್ಟಿ. ನಾವು ಇದರ ಬಗ್ಗೆ ಮಾತನಾಡುತ್ತೇವೆ.

ಅಧ್ಯಕ್ಷರು : ಪ್ರಶ್ನೋತರ ನಂತರ ಅದನ್ನು ತೆಗೆದುಕೊಳ್ಳೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯ : ವಿರೋಧ ಪಕ್ಷದ ನಾಯಕರಿಗೆ ತಾವು ಅವಕಾಶ ಕೊಟ್ಟಿರುವುದರ ಬಗ್ಗೆ ನಮ್ಮದೇನೂ ತಕರಾರು ಇಲ್ಲ. ಅವರೂ ಕೂಡ ರೈತರ ಬಗ್ಗೆ ಮಾತನಾಡತಕ್ಕದ್ದು ; ನೆರೆಹಾವಳಿ ಬಗ್ಗೆ ಮಾತನಾಡತಕ್ಕದ್ದು. ಅದರ ಬಗ್ಗೆ ಖಂಡಿತವಾಗಿಯೂ ನಮ್ಮದೇನೂ ವಿರೋಧ ಇಲ್ಲ. ನಾನು ಎದ್ದು ನಿಂತುಕೊಂಡು ಮಾತನಾಡುವುದಕ್ಕೆ ಬಯಸಿದ್ದುದಾದರೂ ಏಷ್ಟೇನೆ.....

ಅಧ್ಯಕ್ಷರು : ಹೇಳಿದ್ದೀರಿ. ಹೇಳಿದ್ದನ್ನು ಪುನಃ ಏಕೆ ಹೇಳುತ್ತಿದೀರಿ ?

ಶ್ರೀ ಪಿ.ಜಿ.ಆರ್. ಸಿಂಧ್ಯ : ನಿಮ್ಮ ಮನಸ್ಸನ್ನು ಒಲಿಸಿಕೊಳ್ಳಬೇಕಲ್ಲ ? Kindly take it up after the question hour. ನನ್ನ ವಿನಂತಿ ಕೂಡ ಅದೇ ಆಗಿದೆ. ನಾನು ಹೇಳುತ್ತಾ ಇರತಕ್ಕದ್ದು ನಿಯಮದ ಅನುಸಾರವಾಗಿ, ಪುಸ್ತಕದಲ್ಲಿ ಇರತಕ್ಕಂಥ ನಿಯಮಾವಳಿ ಅನುಸಾರವಾಗಿ ನಾವು ಹೋಗಬೇಕು. ನಾವು ನಿನ್ನೆ ದಿವಸ ಕೂಡ ಇದನ್ನೇ ಹೇಳಿದ್ದೇವೆ. ಪ್ರಶ್ನೋತ್ತರ ಮೊದಲು ಆಗಲಿ. ಆದಾದನಂತರ ನಾವು ಸಹಿತ ನಿಲುವಳಿ ಸೂಚನೆಯನ್ನು ಕಳಿಸಿದ್ದೇವೆ. ಜೊತೆಗೆ ನಿನ್ನೆಯೇ ನಾವು 69ರ ಅಡಿಯಲ್ಲಿ

ಚರ್ಚೆ ಆಗಬೇಕೆಂದು ಹೇಳಿದ್ದೇವೆ. ನಾವು ಮೊದಲು ಸೂಚನೆಯನ್ನು ಕೊಟ್ಟಿದ್ದೇವೆ. ಪ್ರೊಸೀಜರ್ ಆಫ್ ಪಾರ್ಲಿಮೆಂಟರಿ ಪ್ರಾಕ್ಟೀಸ್ ಏನಿದೆ ಅದರ ಪ್ರಕಾರ ತಾವು ಅವಕಾಶ ಮಾಡಿ ಕೊಟ್ಟರೆ ಅವರು ಮಾತನಾಡಲಿ. ನಾವೇ ಎಲ್ಲವನ್ನೂ ಗುತ್ತಿಗೆಗೆ ತೆಗೆದುಕೊಳ್ಳುವುದಕ್ಕೆ ಆಗುತ್ತದೆಯೆ ? ಅವರೂ ಮಾತನಾಡಲಿ. ಯಾರು ಬೇಡ ಅನ್ನುತ್ತಾರೆ ?

ಶ್ರೀ ಜಗದೀಶ ಶೆಟ್ಟರ್ : ಇದು ಸಾರ್ವಜನಿಕವಾದ ವಿಚಾರ. ಅದರ ಬಗ್ಗೆ ಎಲ್ಲರೂ ಕೂಡ ಮಾತನಾಡಲಿ.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ರೋಣದಲ್ಲಿ ಆಯುರ್ವೇದ ಆಸ್ಪತ್ರೆ

407 - ಶ್ರೀ ಗುರುಪಾದಗೌಡ ಸಂಗನಗೌಡ ಪಾಟೀಲ್ (ರೋಣ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಈ ವರ್ಷ ಎಷ್ಟು ಆಯುರ್ವೇದ ಆಸ್ಪತ್ರೆಗಳನ್ನು ಆರಂಭಿಸಲು ಸರ್ಕಾರ ಅನುಮತಿ ನೀಡಿದೆ ?

ಆ) ಗದಗ್ ಜಿಲ್ಲೆ ರೋಣ ನಗರದಲ್ಲಿ 10 ಹಾಸಿಗೆಗಳ ಆಯುರ್ವೇದ ಆಸ್ಪತ್ರೆ ಪ್ರಾರಂಭಿಸಲು ಸ್ಥಳ ಪರಿಶೀಲನೆ ಇತರೆ ಅಗತ್ಯ ಕ್ರಮ ತೆಗೆದುಕೊಂಡು ಜಿಲ್ಲಾ ಪಂಚಾಯತ್ ಗದಗ್ ಇವರಿಂದ ಪ್ರಸ್ತಾವನೆ ಸಲ್ಲಿಸಿದ್ದು ನಿಜವೆ ? ಹಾಗಿದ್ದಲ್ಲಿ ಈ ಕುರಿತು ಸರಕಾರ ಕೈಗೊಂಡ ಕ್ರಮಗಳಾವುವು ?

ಇ) ಗದಗ್ ಜಿಲ್ಲೆ ಕೋಟುಮಚಗಿ ಗ್ರಾಮದಲ್ಲಿ ಹೆರಿಗೆ ಆಸ್ಪತ್ರೆ ಪ್ರಾರಂಭಿಸಲು ಸಲ್ಲಿಸಿದ ಪ್ರಸ್ತಾವನೆಗೆ ಸರಕಾರ ಕೈಗೊಂಡ ಕ್ರಮಗಳೇನು ?

ಡಾ|| ಎ.ಬಿ. ಮಾಲಕ ರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) 2000-2001ನೇ ಸಾಲಿನಲ್ಲಿ 1 ಜಿಲ್ಲಾ ಮಟ್ಟದ ಹಾಗೂ 5 ತಾಲ್ಲೂಕು ಮಟ್ಟದ ಆಯುರ್ವೇದ ಆಸ್ಪತ್ರೆಗಳನ್ನು ತೆರೆಯಲು ಸರ್ಕಾರವು ಅನುಮತಿ ನೀಡಿದೆ.

ಆ) ಹೌದು. ಜಿಲ್ಲಾ ಪಂಚಾಯತ್‌ನ ಸ್ಥಾಯಿ ಸಮಿತಿ ಅನುಮೋದನೆಯೊಡನೆ ಪ್ರಸ್ತಾವನೆ ಸ್ವೀಕೃತವಾಗಿದೆ. ಆದರೆ ಪ್ರಸ್ತಾಪಿತ ಲೆಕ್ಕಶೀರ್ಷಿಕೆಯಡಿ ಆಯವ್ಯಯ ಇಲ್ಲದ ಕಾರಣ ಆಯವ್ಯಯ ಅವಕಾಶ ತಿಳಿಸಿ ಪ್ರಸ್ತಾಪಿಸಲು ಜಿಲ್ಲಾ ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳನ್ನು ಕೋರಲಾಗಿದೆ. ಅವರಿಂದ ಪರಿಷ್ಕೃತ ಪ್ರಸ್ತಾವನೆ ಬಂದ ನಂತರ ಮಂಜೂರಾತಿಗೆ ಕ್ರಮ ಕೈಗೊಳ್ಳಲಾಗುವುದು.